ಓ ಎಸ್ ನಂಃ 64-15
ಪಿ ಡಬ್ಲ್ಯೂ ಃ 1

**ದಿಃ 03-02-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 9 ನೇ ಪ್ರತಿವಾದಿ ಪರ ಶ್ರೀ ಪಿ ಎನ್ ಕೆ ವಕೀಲರಿಂದ**

24. ನನಗೆ ಈ ದಾವೆಯಲ್ಲಿ ಏನೇನು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಗೊತ್ತಿದೆ. ನಾನು ಈ ದಾವೆಯನ್ನು ಭಾಗಕ್ಕಾಗಿ ಹೂಡಿರುತ್ತೇನೆ. ನನ್ನ ಮಾವ ನಿಪಿ 2 ರ ಪ್ರಕಾರ ವ್ಯವಸ್ಥಾಪನಾ ಪತ್ರ ಮಾಡಿದ್ದು ಅದರಲ್ಲಿಯ ವಿವರಗಳು ಗೊತ್ತಿದೆ. ಸದರಿ ವ್ಯವಸ್ಥಾಪನ ಪತ್ರವನ್ನು ಯಾವ ದಿನಾಂಕ ಮಾಡಿರುತ್ತಾರೆ ಗೊತ್ತಿದೆಯಾ ಎಂದರೆ 1953 ರಲ್ಲಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ವ್ಯವಸ್ಥಾಪನಾ ಪತ್ರವನ್ನು 7 ಎಕರೆ 25 ಗುಂಟೆ ಜಮೀನಿಗೆ ಮಾಡಲಾಗಿದೆ. ನಿಪಿ 2 ರ ಪ್ರಕಾರ ಆಸ್ತಿಯ ಪೂರ್ವಕ್ಕೆ ದೊಡ್ಡರಂಗಯ್ಯರವರ ಜಮೀನು ಇದೆ ಎಂದರೆ ಸರಿಯಲ್ಲ. ನನಗೆ ವ್ಯವಸ್ಥಾಪನಾ ಪತ್ರದ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಿಪಿ 2 ರ ಪ್ರಕಾರ ಆಸ್ತಿಯ ಚಕ್ಕುಬಂದಿಯ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಿಪಿ 3 ರಿಂದ 9 ಪಹಣಿಗಳನ್ನು ನಾವು ಹಾಜರುಪಡಿಸಿಲ್ಲ. ಸರ್ವೆ ನಂ 51/1 ಎ ದಿಂದ ಸರ್ವೆ ನಂ 51/1 ಎಫ್ ವರೆಗಿನ ಆಸ್ತಿಗಳ ಸರ್ವೆ ನಂಬರ್ ಮತ್ತು ವಿಸ್ತೀರ್ಣ ಗೊತ್ತಿದೆ. ನಾನು ಹಾಜರುಪಡಿಸಿದ ಆರ್ ಟಿ ಸಿ ಗಳಲ್ಲಿಯ ಮಾಲೀಕರ ಹೆಸರು ಏನು ಇದೆ ಎಂದರೆ ಗೊತ್ತಿಲ್ಲ. ಆರ್ ಟಿ ಸಿ ಗಳಲ್ಲಿ ಇರುವ ಮಾಲೀಕರೇ ಆ ಆಸ್ತಿಗಳ ಸ್ವಾಧೀನತೆ ಹೊಂದಿರುತ್ತಾರೆ ಎಂದರೆ ಸರಿಯಲ್ಲ.

25. ನನ್ನ ಗಂಡ ಮುದ್ದುಹನುಮಯ್ಯ ಓ ಎಸ್ ನಂ 239/2008 ನ್ನು ಹೂಡಿದ್ದರು ಎಂದರೆ ಸರಿಯಲ್ಲ. ಆ ದಾವೆಯನ್ನು ನನ್ನ ಗಂಡ ಮತ್ತು ಈ ದಾವೆಯ 6 ನೇ ಪ್ರತಿವಾದಿ ಸೇರಿ ಹೂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ವಯಸ್ಸು ಈಗ 60 ವರ್ಷವಾಗಿರುತ್ತದೆ. 1960 ರಲ್ಲಿ ನನ್ನ ಅತ್ತೆ ರಂಗಮ್ಮರವರು ಆಸ್ತಿಗಳನ್ನು ಮಾರಾಟ ಮಾಡಿರುವ ಬಗ್ಗೆ ಪ್ರಶ್ನೆ ಮಾಡಿದ್ದಿರಾ ಎಂದರೆ ಪ್ರಶ್ನೆ ಮಾಡಿಲ್ಲ ಎಂದು ಹೇಳುತ್ತಾರೆ. ನಾನು ಮದುವೆಯಾಗಿ ಬಂದಾಗ ನಮ್ಮ ಮನೆಗೆ ಸರ್ವೆ ನಂ 51 ರಲ್ಲಿ 10 ಎಕರೆ 24 ಗುಂಟೆ ಜಮೀನು ಇತ್ತು. ಇದೇ ನ್ಯಾಯಾಲಯದಲ್ಲಿ 6 ನೇ ಪ್ರತಿವಾದಿ ನನ್ನ ಗಂಡನ ವಿರುದ್ಧ ಓ ಎಸ್ ನಂ 358/2015 ನ್ನು ಹೂಡಿದ್ದರು ಎಂದರೆ ನನಗೂ ಅದಕ್ಕೂ ಸಂಬಂದವಿಲ್ಲ ಎಂದು ಹೇಳುತ್ತಾರೆ. ಆ ದಾವೆಯಲ್ಲಿ ನಾವು ತಿದ್ದುಪಡಿಗಾಗಿ ಅರ್ಜಿ ಸಲ್ಲಿಸಿದ್ದೆವು ಎಂದರೆ ಸರಿಯಲ್ಲ. ಆ ದಾವೆಯಲ್ಲಿ 7 ಎಕರೆ 27 ಗುಂಟೆ ಜಮೀನು ಇದ್ದು ತಿದ್ದುಪಡಿ ಮಾಡಬೇಕೆಂದು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಆ ದಾವೆಯಲ್ಲಿ ನನ್ನ ಮಾವನಿಗೆ 7 ಎಕರೆ 27 ಗುಂಟೆ ಜಮೀನು ಮಾತ್ರ ಇತ್ತು, 10 ಎಕರೆ ಜಮೀನು ಅಲ್ಲ ಎಂದು ಹೇಳಲಾಗಿದೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ದಾವಾ ಆಸ್ತಿಯನ್ನು ಹೊರತುಪಡಿಸಿ ಭಾಗ

ಮಾಡುವಂತಹ ಬೇರೆ ಆಸ್ತಿಗಳು ಇರುವುದಿಲ್ಲ. ನಿಪಿ 9 ರಲ್ಲಿ ಚೆನ್ನಪ್ಪ ಬಿನ್ ರಂಗಯ್ಯ ರವರ ಹೆಸರಿನಲ್ಲಿದೆ ಎಂದರೆ ಗೊತ್ತಿಲ್ಲ. ನಿಪಿ 9 ನ್ನು ನಾನು ಬೇರೆ ನ್ಯಾಯಾಲಯಗಳಲ್ಲಿ ಪ್ರಶ್ನೆ ಮಾಡಿಲ್ಲ. ನಿಪಿ 9 ಸರಿಯಾಗಿರುವುದರಿಂದ ನಾನು ಅದನ್ನು ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ 2 ರಲ್ಲಿ ಪೂರ್ವಕ್ಕೆ ತೋರಿಸಿದ ದೊಡ್ಡರಂಗಯ್ಯರವರ ಜಮೀನು ಎಂದರೆ ಅದು 9 ನೇ ಪ್ರತಿವಾದಿಯ ಪೂರ್ವಜರ ಜಮೀನು ಎಂದರೆ ಸರಿಯಲ್ಲ. ನಿಪಿ 2 ರ ಪ್ರಕಾರ ಆಸ್ತಿಯ ಚಕ್ಕುಬಂದಿ ಸರಿಯಾಗಿರುತ್ತದೆಯಾ ಎಂದರೆ ನಮಗೆ ಸರಿಯಾಗಿರುತ್ತದೆ ಎಂದು ಹೇಳುತ್ತಾರೆ. 9 ನೇ ಪ್ರತಿವಾದಿ ನನ್ನ ಬೇಡಿಕೆಯನ್ನು ಪೂರೈಸದೇ ಇರುವುದರಿಂದ ನಾನು ಅವರ ವಿರುದ್ದ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. 9 ನೇ ಪ್ರತಿವಾದಿಯ ಜಮೀನಿನ ಮೇಲೆ ಬೇರೆ ಯಾವುದಾದರೂ ನ್ಯಾಯಾಲಯಗಳಲ್ಲಿ ದಾವೆ ಹೂಡಿರುವ ಬಗ್ಗೆ ಮಾಹಿತಿ ಇಲ್ಲ. ದಾವಾ ಆಸ್ತಿಗಳ ಮೇಲೆ ಮಾಗಡಿ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳು ಇರುತ್ತವೆ ಎಂದರೆ ಸರಿಯಲ್ಲ. ಬೇರೆ ಬೇರೆ ಮೊಕದ್ದಮೆಗಳು ಮಾಗಡಿ ನ್ಯಾಯಾಲಯಗಳಲ್ಲಿ ಚಾಲ್ತಿಯಲ್ಲಿದ್ದರೂ ಸಹ ಮತ್ತು ನನಗೆ ಆ ವಿಷಯ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**